# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\3603\2015\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10/01/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಎನ್.ಸಿ.ರಾಜಕುಮಾರ್, #124, ಕಾವೇರಿ ಬ್ಲಾಕ್, ಪೊಲೀಸ್ ವಸತಿ ಗೃಹ, ಕೋರಮಂಗಲ, ಬೆಂಗಳೂರು ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಬೆಂಗಳೂರು ಕೋರಮಂಗಲ ಪೊಲೀಸ್ ವಸತಿ ಗೃಹ ಕಾವೇರಿ ಬ್ಲಾಕ್‌ನ ನಿವಾಸಿಯಾದ ಶ್ರೀ.ಎನ್.ಸಿ.ರಾಜಕುಮಾರ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ತಹಶೀಲ್ದಾರ್ ಶ್ರೀ.ವೆಂಕಟಾಚಲ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ತಂದೆ ಮಾಜಿ ಸೈನಿಕರಾಗಿದ್ದು, ಸರ್ಕಾರದಿಂದ ಹುಣಸೂರು ತಾಲ್ಲೂಕಿನ ಕಸಬಾ ಹೋಬಳಿ ಆಸ್ಪತ್ರೆಯ ಕಾವಲ್ ಗ್ರಾಮದ ಸರ್ವೆ ನಂ.1-89/1047ರ 2 ಎಕರೆ ಕೃಷಿ ಜಮೀನು ಮಂಜೂರಾಗಿದ್ದು, ದೂರುದಾರರ ತಂದೆಯ ಹೆಸರಿಗೆ ಸದರಿ ಜಮೀನನ್ನು ಖಾತೆ ಮಾಡಿಸಿಕೊಳ್ಳದ ಕಾರಣಕ್ಕಾಗಿ, ಸದರಿ ಜಮೀನನ್ನು ಸರ್ಕಾರವು ದೂರುದಾರರ ತಂದೆಗೆ ಯಾವುದೇ ನೋಟೀಸ್ ನೀಡದೇ ಶ್ರೀ.ಕೆ.ಪಿ.ಇಬ್ರಾಹಿಂ ರವರಿಗೆ 1979ರಲ್ಲಿ ಮರು ಹಂಚಿಕೆ ಮಾಡಿದ್ದಾರೆ. ದೂರುದಾರರ ತಂದೆಯು 1988ರಲ್ಲಿ ಮೃತರಾಗಿದ್ದು, ದೂರುದಾರರ ತಾಯಿಯು 2007ರಲ್ಲಿ ಮೃತರಾಗಿದ್ದಾರೆ ಹಾಗೂ ಹುಣಸೂರು ತಾಲ್ಲೂಕಿನ ಬಿಳಿಕೆರೆ ಹೋಬಳಿಯ ಹುಯಿಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.16/17ರಲ್ಲಿ ಖಾಲಿ ಇರುವ ಸರ್ಕಾರದ ಜಮೀನನ್ನು ಮಂಜೂರು ಮಾಡಿಕೊಡುವಂತೆ ಕೋರಿದ್ದರೂ ಸಹ, ಇಲ್ಲಿಯವರೆಗೂ ಮಂಜೂರು ಮಾಡದೇ ವಿಳಂಬ ನೀತಿ ಅನುಸರಿಸುತ್ತಾ, ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆಂದು ಹೇಳಿದ್ದಾರೆ.

Sd/-

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ಆಸ್ಪತ್ರೆಯ ಕಾವಲ್ ಸರ್ವೆ ನಂ.1047ರ ಮೂಲ ದಾಖಲೆಯಂತೆ ಸರ್ವೆ ನಂ.1ರ ಪೈಕಿ ಬ್ಲಾಕ್ ನಂ.89 ಆಗಿದ್ದು, ದುರಸ್ತಿಯಂತೆ ಸರ್ವೆ ನಂ.1047 ಆಗಿದೆ. ಸದರಿ ಜಾಗ ದೂರುದಾರರ ತಂದೆಗೆ ಮಂಜೂರಾಗಿಲ್ಲ. ದೂರುದಾರರು ದೂರು ಮನವಿಯಲ್ಲಿ ವಿವರಿಸಿರುವಂತೆ ಆಸ್ಪತ್ರೆಯ ಕಾವಲ್ ಸರ್ವೆ ನಂ.1047 ಜಮೀನು ದೂರುದಾರರ ತಂದೆಗೆ ಮಂಜೂರಾಗಿದೆಯೆಂದು ಪ್ರಸ್ತಾಪಿಸಿರುವಂತೆ ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡು ಕೊಳ್ಳಬಹುದಾಗಿದೆಯೆಂದು ಹೇಳಿದ್ದಾರೆ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ದಿನಾಂಕ:19/02/1957ರಂದು ನಡೆದ ಮಾಜಿ ಸೈನಿಕರ ಆಯ್ಕೆ ಸಮಿತಿ ಸಭೆಯ ನಡವಳಿಯನ್ವಯ ಹುಣಸೂರು ತಾಲ್ಲೂಕ್ ಕಸಬಾ ಹೋಬಳಿ ಆಸ್ಪತ್ರೆ ಕಾವಲ್ ಗ್ರಾಮದ ರೆವಿನ್ಯೂ ಸರ್ವೆ ನಂ.1047 (ಸರ್ವೆ ನಂ.1/89)ರಲ್ಲಿ 2 ಎಕರೆ ಜಮೀನು ದೂರುದಾರರ ತಂದೆ ಶ್ರೀ.ನಾರಾಯಣಸ್ವಾಮಿ ರವರಿಗೆ ದಿ:22/03/1968ರಂದು ಮಂಜೂರಾಗಿರುವುದು ಸಾಗುವಳಿ ಚೀಟಿಯಲ್ಲಿ ಕಂಡು ಬಂದಿದೆ. ಆದಕಾರಣ, ದೂರುದಾರರ ತಂದೆಗೆ ಸದರಿ ಆಸ್ಪತ್ರೆ ಕಾವಲ್ ಗ್ರಾಮದ ರೆವಿನ್ಯೂ ಸರ್ವೆ ನಂ.1047 (ಸರ್ವೆ ನಂ.1/89)ರಲ್ಲಿ 2 ಎಕರೆ ಮಂಜೂರಾಗದೇ ಇರುವುದು ದಾಖಲೆಗಳಲ್ಲಿ ಕಂಡು ಬಂದಿಲ್ಲವೆಂದು ಎದುರುದಾರರು ಹೇಳಿರುವುದು ಸೂಕ್ತವಾಗಿಲ್ಲ. ಸದರಿ ಸ್ವತ್ತು ಶ್ರೀ.ಕೆ.ಪಿ.ಇಬ್ರಾಹಿಂ ಬಿನ್ ಮಹಮದ್ ಖಾನ್ ರವರಿಗೆ ಮಂಜೂರಾಗಿದ್ದು, ಅವರು ಸದರಿ ಸ್ವತ್ತನ್ನು ಶ್ರೀಮತಿ.ಕಮಲಾಕ್ಷಮ್ಮ ಕೋಂ ಪಿ.ಕೃಷ್ಣ ನಾಯರ್ ರವರಿಗೆ ಮಾರಾಟ ಮಾಡಿದ್ದಾರೆಂದು ಎದುರುದಾರರು ಹೇಳಿದ್ದಾರೆ. ಎದುರುದಾರರು ಸಲ್ಲಿಸಿರುವ ಮಂಜೂರಾತಿ ಪ್ರಮಾಣ ಪತ್ರ ದಾಖಲೆಗಳ ಪೈಕಿ, ಶ್ರೀ.ಕೆ.ಪಿ.ಇಬ್ರಾಹಿಂ ರವರಿಗೆ ಸರ್ವೆ ನಂ.1047ರಲ್ಲಿ 1 ಎಕರೆ 4 ಗುಂಟೆ (2 ಗುಂಟೆ ಖರಾಬು ಸೇರಿ) ಮಂಜೂರಾದ ಬಗ್ಗೆ ಮಂಜೂರಾತಿ ಪ್ರಮಾಣ ಪತ್ರ ಒಂದಾಗಿದೆ. ಬಹುಶಃ ಶ್ರೀ.ಕೆ.ಪಿ.ಇಬ್ರಾಹಿಂ ರವರ ಹೆಸರಿಗೆ 1949ನೇ ಸಾಲಿನಲ್ಲಿ ಸಾಗುವಳಿ ಚೀಟಿ ಕೊಟ್ಟಿದ್ದು, ದೂರುದಾರರ ತಂದೆಗೆ ಅದೇ ಜಮೀನನ್ನು ನಂತರದ ದಿನದಲ್ಲಿ ಪುನಃ ಮಂಜೂರು ಮಾಡಲಾಗಿರುವುದು ಕಂಡು ಬಂದಿದೆ. ಪ್ರಸ್ತುತ ಮೂಲ ಮಂಜೂರಾತಿದಾರರು ಸದರಿ ಜಮೀನನ್ನು ಶ್ರೀಮತಿ.ಕಮಲಾಕ್ಷಮ್ಮ ಕೋಂ ಪಿ.ಕೃಷ್ಣ ನಾಯರ್ ರವರಿಗೆ ಮಾರಾಟ ಮಾಡಿದ್ದಾರೆ, ದೂರುದಾರರಿಗೆ ಆಸ್ಪತ್ರೆಕಾವಲ್ ಸರ್ವೆ ನಂ.1ರಲ್ಲಿ ಅಥವಾ ಕುಡಿನೀರು ಮುದ್ದೇನಹಳ್ಳಿ ಗ್ರಾಮದ ಸರ್ವೆ ನಂ.5 ಮತ್ತು 29 ಅಥವಾ ಬಿಳಿಕೆರೆ ಹೋಬಳಿಯ ಹುಯಿಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.16/17ರಲ್ಲಿ ಯಾವುದಾದರೂ ಒಂದು ಕೃಷಿ ಭೂಮಿಯನ್ನು ಪರ್ಯಾಯವಾಗಿ ಮಂಜೂರು ಮಾಡಬೇಕೆಂದು ದೂರುದಾರರು ಕೋರಿದ್ದಾರೆ.

5. ಆದ್ದರಿಂದ, ದೂರುದಾರರ ತಂದೆಗೆ ಮಾಜಿ ಸೈನಿಕರಿಗೆ ಹುಣಸೂರು ತಾಲ್ಲೂಕಿನಲ್ಲಿ ಮೀಸಲಿಟ್ಟ ಕೃಷಿ ಭೂಮಿಗಳ ಪೈಕಿ ಯಾವುದಾದರೊಂದು ಕೃಷಿ ಭೂಮಿಯನ್ನು ಮಂಜೂರು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು

MYS- 3603/15 Direct

ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

6. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 11.1.18

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.